**ಓ.ಎಸ್. ನಂ. 328/2014 ಡಿ.ಡಬ್ಲೂ-1 ಹೆಸರು - ವೀರಭದ್ರಪ್ಪ**

**ಸಾಕ್ಷಿಯನ್ನು ದಿನಾಂಕಃ 23/06/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಹೆಚ್.ಪಿ.ಎಸ್. ವಾದಿ ಪರ ವಕೀಲರಿಂದಃ-**

ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ. ದಾವಾ ಸ್ವತ್ತು ಯಾವಾಗಿನಿಂದ ನಿಮ್ಮ ಸ್ವಾಧೀನದಲ್ಲಿ ಇದೆ ಎಂದು ಕೇಳಿದ್ದಕ್ಕೆ ಸಾಕ್ಷಿಯು 2000 ಇಸವಿಯಲ್ಲಿ ನನಗೆ ಕ್ರಯ ಆಗಿದೆ ಮತ್ತು ಅದಕ್ಕೂ ಮೊದಲು 1998 ರಲ್ಲಿ ನನಗೆ ಭೋಗ್ಯ ವಾಗಿದ್ದು ಆಗಿನಿಂದ ನನ್ನ ಸ್ವಾಧೀನದಲ್ಲಿ ಇದೆ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿದೆ. ಕ್ರಯ ಪತ್ರ ಬರೆಯುವಾಗ ಸ್ವತ್ತನ್ನು ಮಾರಾಟ ಮಾಡಿದವರು ಮತ್ತು ಸಾಕ್ಷಿದಾರರಾದ ಗುರುಸ್ವಾಮಿ ಮತ್ತು ಶಿವರಾಮು ಇದ್ದರು. ಕ್ರಯ ಪತ್ರವನ್ನು ಸೋಮಾರಾಧ್ಯ ಎನ್ನುವವರು ಬರೆದಿರುತ್ತಾರೆ. ನನಗೆ ಕ್ರಯ ಪತ್ರ ಬರೆದುಕೊಟ್ಟ ಸೋಮಾರಾಧ್ಯ ಮತ್ತು ಸಾಕ್ಷಿದಾರರು ನನಗೆ ನೆಂಟರು ಎಂದರೆ ಸರಿಯಲ್ಲ. ವಾದಿಯರು ನನಗೆ ನೋಟೀಸ್ ಕಳುಹಿಸಿ ದಾವಾ ಸ್ವತ್ತಿನಲ್ಲಿ ಭಾಗ ಬರಬೇಕು ಎಂದು ಹೇಳಿದ್ದರು ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ವಾದಿಯರಿಗೆ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಚಿಕ್ಕಂದಿನಿಂದಲೂ ಪರಿಚಯ ಮತ್ತು ಅವರ ಕುಟುಂಬದ ಬಗ್ಗೆ ನನಗೆ ಗೊತ್ತು. 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಮಕ್ಕಳ ಲಾಲನೆ ಪೋಷಣೆಗಾಗಿ ಮತ್ತು ಸಾಲ ತೀರಿಸುವುದಕ್ಕಾಗಿ ಮಾರಾಟ ಮಾಡಿರುತ್ತಾರೆ. 1 ನೇ ಪ್ರತಿವಾದಿಗೆ ಸಹಿ ಹಾಕುವುದನ್ನು ಬಿಟ್ಟರೆ ಓದು ಮತ್ತು ಬರಹ ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಭೋಗ್ಯ ಪತ್ರ ರದ್ದತಿ ಮಾಡಿಸಲು ಎಂದು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳು ಅವರ ಅಜ್ಜನ ಮನೆಯಲ್ಲಿ ವಾಸವಿದ್ದರು ಹಾಗಾಗಿ ಅವರ ಲಾಲನೆ ಪೋಷಣೆಯ ಜವಬ್ದಾರಿ 1 ನೇ ಪ್ರತಿವಾದಿಯ ಮೇಲೆ ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದುಡಿಯುವ ವಯಸ್ಸಿಗೆ ಬಂದ ನಂತರದಲ್ಲಿ ತಾನೇ ದುಡಿದು ತನ್ನ ಸಹೋದರಿಯರ ವಿವಾಹವನ್ನು

ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಯಾವುದೇ ಜವಬ್ದಾರಿ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದರೆ ಸರಿಯಲ್ಲ. ಮೋಸದಿಂದ ದಾವಾ ಸ್ವತ್ತಿನ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮದ್ಯಪಾನದ ದುಷ್ಚಟವಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಚನಪ್ಪ ಎನ್ನುವವರಿಂದ ಬಂದಿದೆ ಎಂದು ನುಡಿಯುತ್ತಾರೆ. ಭೋಗ್ಯದ ಹಣವನ್ನು ವಜಾ ಮಾಡಿಕೊಂಡು ಉಳಿಕೆ 39,000/- ರೂಗಳನ್ನು ಕ್ರಯ ಪತ್ರ ನೊಂದಣಿಯಾಗುವ ಮುಂಚೆಯೇ ಸಾಕ್ಷಿದಾರರ ಸಮ್ಮುಖದಲ್ಲಿ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ನೊಂದಣಿಯಾಗುವ ದಿನವೇ 39,000/- ರೂಗಳನ್ನು ಕೊಟ್ಟಿರುತ್ತೇನೆ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನೆ. ವಾದಿಯರು ಮತ್ತು 3 ನೇ ಪ್ರತಿವಾದಿಯನ್ನು ಬಿಟ್ಟರೇ 1 ನೇ ಪ್ರತಿವಾದಿಗೆ ಬೇರೆ ಮಕ್ಕಳು ಇಲ್ಲ. ದಾವಾ ಸ್ವತ್ತನ್ನು ಬಿಟ್ಟು 1 ನೇ ಪ್ರತಿವಾದಿಗೆ ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರಿಗೆ ಭಾಗಾಂಶದ ಹಕ್ಕ ಇದೆ ಎಂದು ಗೊತ್ತಿದ್ದರು ಕೂಡ ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

( 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.)

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**
**ನಂಜನಗೂಡು**